**ಅಸಲು ದಾವಾ ನಂಃ 118/2018**
**ಪಿ.ಡಬ್ಲ್ಯೂಃ 1 ,**

ದಿನಾಂಕ :04-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು :- ಶ್ರೀ ಪಿ.ಡಿ. ವಾದಿ ಪರ ವಕೀಲರಿಂದ :

ನನಗೆ ಪ್ರತಿವಾದಿಯರು ಗೊತ್ತು. ಅದೇ ರೀತಿ ನನಗೆ 1 ನೇ ಪ್ರತಿವಾದಿ ತಂದೆ ಮಲ್ಲಣ್ಣ ತಂದೆ ಸಾಬಣ್ಣ ಕೊಟಗೇರಿ ಗೊತ್ತು. ನನ್ನ ತಂದೆಗೆ 1 ನೇ ಪ್ರತಿವಾದಿಯ ತಂದೆ ಮಲ್ಲಣ್ಣ ತಂದೆ ಸಾಬಣ್ಣ ಕೊಟಗೇರಿ ಗೊತ್ತು . ದಾವಾ ಸ್ವತ್ತುಗಳು ಮೊದಲು ಕೊಲ್ಲೂರು ಗ್ರಾಮದಲ್ಲಿ ಇದ್ದವು ಎಂದರೆ ಸರಿ. ಸರಕಾರದ ಆದೇಶದ ಪ್ರಕಾರ ದಾವಾ ಜಮೀನುಗಳು ತರ್ಕಸಪೇಟ ಗ್ರಾಮಕ್ಕೆ ಒಳಪಟ್ಟವು ಎಂದರೆ ಸರಿ. ಕೊಲ್ಲೂರು ಗ್ರಾಮದಲ್ಲಿ ಸ.ನ.501 ನ್ನು ತರ್ಕಸಪೇಟಗೆ ಬಂದ ನಂತರ ಸ.ನ. 55 ಆಯಿತು ಎಂದರೆ ಸರಿ. ಸದರಿ ಸ.ನ. ಕ್ಷೇತ್ರ 4 ಎಕರೆ 31 ಗುಂಟೆ ಇದ್ದು ಈಗ 4 ಎಕರೆ 27 ಗುಂಟೆ ಆಗಿದೆ ಎಂದರೆ ಸರಿ. ಸ.ನ. 501 ಒಟ್ಟು ಕ್ಷೇತ್ರ 16 ಎಕರೆ 31 ಗುಂಟೆ ಇದ್ದು, ಸ್ವಲ್ಪ ಮಾರಾಟ ಮಾಡಿ ಉಳಿದ ಕ್ಷೇತ್ರ 4 ಎಕರೆ 31 ಗುಂಟೆಗೆ ನಮ್ಮ ತಂದೆ ಮಾಲೀಕರಾಗಿದ್ದರು. ಸ.ನ. 501 ರಲ್ಲಿ ಮಲಣ್ಣ, ಸಣ್ಣಶಾಂತಪ್ಪ, ರಂಗಪ್ಪ ಇವರಿಗೆ ಮಾರಾಟ ಮಾಡಿದ್ದಾರೆ. ಮಲ್ಲಣ್ಣನಿಗೆ 5 ಎಕರೆ ಮಾರಾಟ ಮಾಡಿದ್ದಾರೆ. 5 ಎಕರೆ ಜಮೀನು ಮಲ್ಳಣ್ಣ ತಂದೆ ಸಾಬಣ್ಣ ಇವರ ಹೆಸರಿಗೆ ಪಹಣಿ ಇದೆ ಎಂದರೆ ಸರಿ. ಮಲ್ಲಣ್ಣ ತಂದೆ ಸಾಬಣ್ಣ 1 ನೇ ಪ್ರತಿವಾದಿಯ ತಂದೆ ಎಂದರೆ ಸರಿ.

ಕೊಲ್ಲೂರು ಗ್ರಾಮದಲ್ಲಿ ಸ.ನ. 477 ಇದ್ದು, ತರ್ಕಸಪೇಟಗೆ ಬಂದ ನಂತರ ಸ.ನ. 31 ಆಯಿತು ಎಂದರೆ ಸರಿ. ಸದರಿ ಒಟ್ಟು ಕ್ಷೇತ್ರ 19 ಎಕರೆ 09 ಗುಂಟೆ ಇದೆ, ಈಗ ಅದರಲ್ಲಿ 2 ಎಕರೆ 09 ಗುಂಟೆ ಮಾತ್ರ ಉಳಿದಿದೆ ದಾವಾ ಆಸ್ತಿ ಪೈಕಿ 4 ಎಕರೆ 27 ಗುಂಟೆ ಮತ್ತು 2 ಎಕರೆ 9 ಗುಂಟೆ ಇವುಗಳನ್ನು ನನ್ನ ತಂದೆ 1989 ರಲ್ಲಿ ಮಲ್ಲಣ್ಣ ತಂದೆ ಸಾಬಣ್ಣ ಕೊಟಗೇರಿ ಇವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸ.ನ. 477 ರಲ್ಲಿ 17 ಎಕರೆ ಮಾರಾಟ ಮಾಡಿದ್ದು, 5 ಎಕರೆ ಮತ್ತು 3 ಎಕರೆಯನ್ನು ಬಸವರಾಜ ತಂದೆ ಮಲ್ಲಣ್ಣ ಕೊಟಗೇರಿ ಇವರಿಗೆ ಮಾರಾಟ ಮಾಡಿದ್ದಾರೆ, ತಿಪ್ಪಮ್ಮ ಇವರಿಗೆ 3 ಎಕರೆ, ಸಿಧ್ರಾಮ 3 ಎಕರೆ, ಮರೇಪ್ಪ ತಂದೆ ರಂಗಪ್ಪ 3 ಎಕರೆ ಮಾರಾಟ ಮಾಡಿದ್ದಾರೆ.

**ಅಸಲು ದಾವಾ ನಂಃ 118/2018**
**ಪಿ.ಡಬ್ಲ್ಯೂಃ 1 ,**

ಅದೇ ರೀತಿ ನಮ್ಮ ತಂದೆ ಮಾರಾಟ ಮಾಡಿದ ಬಗ್ಗೆ ಮಲ್ಲಣ್ಣ ತಂದೆ ಸಾಬಣ್ಣ ಇವರಿಗೆ ನೊಂದಾಯಿತವಲ್ಲದ ದಾಖಲೆಯನ್ನು ಸಹ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ದಿ: 29-07-1989 ರಂದು ನನ್ನ ತಂದೆಯವರು, ಮಲ್ಲಪ್ಪ ಬೆಳಗೇರಿ, ನಾಗಪ್ಪ ತಂದೆ ಲಕ್ಷಣ ಖಾಣಗುಂದಿ, ಶರಣಪ್ಪ ತರ್ಕಸಪೇಟ ಇವರ ಸಮಕ್ಷಮ ದಾಖಲೆ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ . ಅದೇ ದಿನ ರೂ. 1,03,500/- ಹಣ ಕೊಟ್ಟು ಪಡೆದು ಅದೇ ದಿನ ನಮ್ಮ ತಂದೆ 1 ನೇ ಪ್ರತಿವಾದಿ ತಂದೆಗೆ ಜಮೀನುಗಳು ಸ್ವಾಧೀನ ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಜಮೀನನ್ನು ಮಲ್ಲಣ್ಣ ಖರಿದಿ ಮಾಡಿದ ನಂತರ 1 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. 1995 ರಿಂದ ದಾವಾ ಪಹಣಿಯಲ್ಲಿ 1 ನೇ ಪ್ರತಿವಾದಿ ಹೆಸರು ದಾಖಲು ಆಗಿದೆ ಎಂದರೆ ಸರಿಯಲ್ಲ. ಅದೇ ರಿತಿ 1 ನೇ ಪ್ರತಿವಾದಿ ತಂದೆ ಇಚ್ಚೆ ಪ್ರಕಾರ 1 ನೇ ಪ್ರತಿವಾದಿ, ಪ್ರತಿವಾದಿ ನಂ -2 ಮತ್ತು 3 ಇವರಿಗೆ ದಾನ ಪತ್ರ ಬರೆದು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ನೊಂದಾಯಿತ ದಾನ ಪತ್ರ ಪ್ರಕಾರ ಪ್ರತಿವಾದಿ ನಂ-2 ಮತ್ತು 3 ಇವರ ಹೆಸರಿಗೆ ಪಹಣಿ ಆಗಿದೆ ಎಂದರೆ ಸರಿಯಲ್ಲ .

**( ಈ ಹಂತದಲ್ಲಿ ವಾದಿ ಪರ ವಕೀಲರು ಹೆಚ್ಚಿನ ಪಾಟಿ ಸವಾಲಿಗಾಗಿ ಕಾಲವಕಾಶ ಕೋರಿದ್ದು, ಪಾಟಿ ಸವಾಲು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**